ESI.A.No.43/2021

AW-1,

ದಿನಾಂಕಃ 03-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ- ಎದುರುದಾರರ ಪರವಾಗಿಃ ಶ್ರೀ. SWK ವಕೀಲರಿಂದ

ನಮ್ಮ ಶಾಲೆಯು 2004 ರಿಂದ ನಡೆಯುತ್ತಿದೆ. ನಾನು ಈ ಶಾಲೆಯ ಸ್ಕ್ರೆಟರಿ ಆಗಿರುತ್ತೇನೆ. 2011 ರಿಂದ 2016 ರವರೆಗೆ ಇ ಎಸ್ ಐ ವಂತಿಗೆಯನ್ನು ಪಾವತಿ ಮಾಡಿಲ್ಲ ಎಂದು ನನಗೆ ಇ ಎಸ್ ಐ ಕಾರ್ಪೋರೇಶನ್ನಿಂದ ನೋಟೀಸ್ ಬಂದಿತ್ತು ಎಂದರೆ ನಿಜ. ಸದರಿ ನೋಟೀಸು 9-12-2016 ರಂದು ನೀಡಲಾಗಿದ್ದು ರೂ.94,466-00 ಗಳನ್ನು ಕಟ್ಟಬೇಕೆಂದು ತಿಳಿಸಲಾಗಿತ್ತು ಎಂದರೆ ನಿಜ. ಸದರಿ ನೋಟೀಸ್ ಬಂದ ಬಳಿಕ ನಾನು ಇ ಎಸ್ ಐ ವಂತಿಗೆಯನ್ನು ಪಾವತಿ ಮಾಡಿದೆ ಎಂದರೆ ನಿಜ. ಆನಂತರ ಇನ್ನೊಂದು ಅವಧಿಗೆ ಅಂದರೆ ಜೂನ್ 2016 ರಿಂದ ಮಾರ್ಚ್ 2018 ರಲ್ಲಿ ನಾನು ಇ ಎಸ್ ಐ ವಂತಿಗೆಯನ್ನು ಪಾವತಿ ಮಾಡಿಲ್ಲ ಎಂದು ಮತ್ತೊಂದು ಸಿ-18 ನೋಟೀಸು ದಿಃ5-9-2018 ಗೆ ಬಂತು ಎಂದರೆ ನಿಜ. ಆ ನೋಟೀಸಿನಲ್ಲಿ ರೂ.90,091-00 ಗಳನ್ನು ಕಟ್ಟಬೇಕೆಂದು ತಿಳಿಸಲಾಗಿತ್ತು ಎಂದರೆ ನಿಜ. ಆ ನೋಟೀಸಿನಲ್ಲಿ ನನಗೆ 3 ದಿನ ಅಂದರೆ 9-10-2018, 30-10-2018 ಮತ್ತು 8-11-2018 ರಂದು ಖುದ್ದು ಸುನಾವಣೆಗೆ ಹಾಜರಾಗಬೇಕೆಂದು ಅವಕಾಶ ನೀಡಲಾಗಿತ್ತು ಎಂದರೆ ನಿಜ. ನಾನು30-10-2018 ಮತ್ತು 8-10-2018 ರಂದು ಖುದ್ದು ಸುನಾವಣೆಗೆ ಹಾಜರಾಗಿದ್ದೆ ಎಂದರೆ ನಿಜ. ಆ ಸುನಾವಣೆಯ ಸಮಯದಲ್ಲಿ ನಮ್ಮ ಶಾಲೆಗೆ ಬೇರೆ ಕೋಡ್ ನಂಬರನ್ನು 1-6-2016 ರಂದು ಪಡೆದಿದ್ದೇನೆ ಎಂದು ಹೇಳಿದ್ದೇನೆ ಎಂದರೆ ನಿಜ. ಹಳೆಯ ಕೋಡ್ ನಂಬರಿನಲ್ಲಿ ಜೂನ್ 2016, ಡಿಸೆಂಬರ್ 2016, ಮಾರ್ಚ್ 2017, ಜೂನ್ 2017, ಸೆಪ್ಟಂಬರ್ 2017 ಮತ್ತು ಅಕ್ಟೋಬರ್ 2017 ರಲ್ಲಿ ಇ ಎಸ್ ಐ ವಂತಿಗೆ ಪಾವತಿ ಆಗಿಲ್ಲ ಎಂದರೆ ನಿಜ. ಈ ಅವಧಿಯಲ್ಲಿ ಇ ಎಸ್ ಐ ವಂತಿಗೆ ಪಾವತಿ ಮಾಡಲು ವಿಳಂಬವಾಗಿರುವುದರಿಂದ ಡ್ಯಾಮೇಜಸ್ ಕಟ್ಟಿ ಎಂದು ರೂ.88,594-00 ಗಳಿಗೆ ಡಿ-18 ನೋಟೀಸ್ ಬಂದಿತ್ತು ಎಂದರೆ ನಿಜ. ಈ ನೋಟೀಸಿನಲ್ಲಿ 29 -9-2021 ಮತ್ತು 27-10-2021 ರಂದು ಸುನಾವಣೆಗೆ ಹಾಜರಾಗಬೇಕೆಂದು ತಿಳಿಸಲಾಗಿತ್ತು ಎಂದರೆ ನಿಜ. 27-10-2021 ರಂದು ನಾನು ಸುನಾವಣೆಗೆ ಹಾಜರಾಗಿ ಒಂದು ಪತ್ರವನ್ನು ಕೊಟ್ಟೆ ಎಂದರೆ ನಿಜ. ಆ ಸುನಾವಣೆಯ ಸಮಯದಲ್ಲಿ ಕೊಟ್ಟ ಪತ್ರದಲ್ಲಿ 2011 ರಿಂದ 2016 ರವರೆಗೆ ಇ ಎಸ್ ಐ ವಂತಿಗೆಯನ್ನು ಪಾವತಿಸಬೇಕೆಂದು ತಿಳಿದಿರಲಿಲ್ಲ ಆದ್ದರಿಂದ ತಡವಾಗಿದೆ ಎಂದು ಹೇಳಿದ್ದೆ ಎಂದರೆ ನಿಜ. ಆ ಪತ್ರದಲ್ಲಿ ಹಳೆಯ ಕೋಡ್ ನಂಬರ್ ಕ್ಯಾನ್ಸಲ್ ಮಾಡಿ ಎಂದು ಕೇಳಿದ್ದೆ ಎಂದರೆ ನಿಜ. ದಿಃ27-10-2021 ರಂದು ಕೊಟ್ಟ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದರೆ ನಿಜ. ಮಾರ್ಚ್ 2011 ರಿಂದ ಮೇ 2016 ರವರೆಗೆ ಇ ಎಸ್ ಐ ಕಂತನ್ನು ಕಟ್ಟಿಲ್ಲ ಎಂದು ನನ್ನ ಮೇಲೆ 4 ನೇ ಹೆಚ್ಚುವರಿ

ESI.A.No.43/2021
AW-1,

ಸಿವಿಲ್ ಜಡ್ಜ್ ಮತ್ತು 1 ನೇ ಜೆಎಂಎಫ್ಸಿ ಮೈಸೂರು ನ್ಯಾಯಾಲಯದಲ್ಲಿ ಸಿಸಿ 851/2019 ರಂತೆ ಕೇಸು ದಾಖಲಾಗಿದೆ ಎಂದರೆ ನಿಜ. ಈ ಸಿಸಿ ಕೇಸಿನಲ್ಲಿ ರೂ.62,044-00 ಗಳು ವಂತಿಗೆ ನೀಡಬೇಕೆಂದು ಹೇಳಲಾಗಿತ್ತು ಎಂದರೆ ನಿಜ. ಆ ಕೇಸು ಹಾಕಿದ ನಂತರ ರೂ.62,044-00 ಮತ್ತು ರೂ.23,236-00 ಕಟ್ಟಿದೆ ಎಂದರೆ ನಿಜ. ಆ ಕೇಸಿನಲ್ಲಿ ಹೆಚ್ಚಿನ ಬಡ್ಡಿಯಾಗಿ ರೂ.32,148-00 ಗಳನ್ನು ಪಾವತಿಸಬೇಕೆಂದು ತಿಳಿಸಲಾಗಿತ್ತು ಎಂದರೆ ನಿಜ. ಆ ಹಣವನ್ನು ಕಟ್ಟಿ ಕೇಸನ್ನು ಮುಗಿಸಿಕೊಂಡೆ ಎಂದರೆ ನಿಜ. ಆ ಕೇಸು ಕ್ಲೋಸ್ ಆಗಿರುವ ಬಗ್ಗೆ ದಾಖಲೆಯನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಿಲ್ಲ ಎಂದರೆ ನಿಜ. 2011 ರಿಂದ 2016 ರವರೆಗೆ ಕೊಡಬೇಕಾದ ವಂತಿಗೆ ತಡವಾದ ಬಗ್ಗೆ ನಾನು ಡ್ಯಾಮೇಜಸ್ ಕಟ್ಟಿರಲಿಲ್ಲ ಎಂಬುದು ನಿಜ. ಎದುರುದಾರರು ಡ್ಯಾಮೇಜಸ್ ಕೋರಿ ಮಾಡಿದ ಆದೇಶವು ಸಮರ್ಪಕವಾಗಿದೆ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ತಿಳುವಳಿಕೆ ಇರಲಿಲ್ಲ ಆದ್ದರಿಂದ ಸದರಿ ಆದೇಶವನ್ನು ಬದಲಾಯಿಸಿಕೊಡಿ ಎಂದು ಕೇಳಿದ್ದೆ ಎಂದು ನುಡಿಯುತ್ತಾರೆ. ನನಗೆ ಡ್ಯಾಮೇಜಸ್ ಕಟ್ಟಲು ತೊಂದರೆ ಇಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲಾತಿಗಳೆಲ್ಲಾ ಸೃಷ್ಟಿಸಿದ ದಾಖಲಾತಿಗಳು ಮತ್ತು ನಾನು ಹೇಳುತ್ತಿರುವುದೆಲ್ಲಾ ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ರುಡೋಲ್ಫ್ ಪಿರೇರಾ),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಇ.ಎಸ್.ಐ.ನ್ಯಾಯಾಲಯ,
ಮೈಸೂರು.